20	ಗದಗ್	0	0
21	ಹಾವೇರಿ	5	5
22	ಕೋಲಾರ	4	4
23	ಕೊಪ್ಪಳ	0	0
24	ಮಂಡ್ಯ	7	7
25	ಮೈಸೂರು	4	4
26	ರಾಮನಗರ	0	0
27	ತುಮಕೂರು	4	4
28	ಉಡುಪಿ	0	0
29	ಉತ್ತರ ಕನ್ನಡ	0	0
30	ಯಾದಗಿರಿ	0	0
	ಒಟ್ಟು	**78**	**113**

ವಿದ್ಯಾರ್ಥಿಗಳ ಅನುಪಾತ ಮೇರೆಗೆ ಶಿಕ್ಷಕರನ್ನು ನಿಯೋಜಿಸುವುದು

292 (667) ಶ್ರೀ ಹೆಚ್.ಗೋಪಾಲ ಭಂಡಾರಿ (ಕಾರ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೆಚ್ಚುವರಿ ಶಿಕ್ಷಕರನ್ನು ಗುರ್ತಿಸುವಾಗ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಗುರುತಿಸುತ್ತಿದ್ದರೆ ಸರ್ಕಾರಿ ಶಾಲೆ ಮತ್ತು ಅನುದಾನಿತ ಖಾಸಗಿ ಶಾಲೆಗಳಲ್ಲಿ ಎಷ್ಟೆಷ್ಟು ವಿದ್ಯಾರ್ಥಿಗಳಿಗೆ ಒಬ್ಬೊಬ್ಬ ಅಧ್ಯಾಪಕರು ಇರಬೇಕೆಂದು ಸರ್ಕಾರ ನಿಗದಿಪಡಿಸಿದೆ;

ಆ) ಈ ಆರ್ಥಿಕ ವರ್ಷದಲ್ಲಿ ಪ್ರೌಢಶಾಲೆ, ಪ್ರಾಥಮಿಕ ಶಾಲೆ ಹಾಗೂ ಅನುದಾನಿತ ಶಾಲೆಗಳ ಅಧ್ಯಾಪಕರ ಸಂಬಳ ಪ್ರತೀ ತಿಂಗಳು ಸಿಗದೆ ವಿಳಂಬವಾಗುತ್ತಿರುವುದು ನಿಜವೇ; ಕಾರಣಗಳೇನು;

ಇ) ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಿಂದ ಮುಚ್ಚಿದ ಸರ್ಕಾರಿ ಶಾಲೆಗಳೆಷ್ಟು; ಇದಕ್ಕೆ ಕಾರಣಗಳೇನು?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಖಾಸಗಿ ಅನುದಾನಿತ ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚುವರಿ ಶಿಕ್ಷಕರುಗಳನ್ನು ಗುರ್ತಿಸುವಾಗ ವಿದ್ಯಾರ್ಥಿ, ಶಿಕ್ಷಕರ ಅನುಪಾತ 50:40:1ರ ಪ್ರಕಾರ ಅನುಸರಿಸಲಾಗುತ್ತಿದೆ.

ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 1 ರಿಂದ 5ನೇ ತರಗತಿಯವರೆಗಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈ ಕೆಳಗಿನಂತೆ ಅನುಪಾತದನ್ವಯ ಲೆಕ್ಕ ಹಾಕಿ ಉಳಿದ ಹುದ್ದೆಗಳನ್ನು ಹೆಚ್ಚುವರಿ ಎಂದು ಪರಿಗಣಿಸಲಾಗುತ್ತಿದೆ.

1 ರಿಂದ 20 ಹಾಜರಾತಿ – ಒಬ್ಬ ಶಿಕ್ಷಕರು.
20 ರಿಂದ 60 ಹಾಜರಾತಿ – ಇಬ್ಬರು ಶಿಕ್ಷಕರು.
61 ರಿಂದ 90 ಹಾಜರಾತಿ – ಮೂರು ಶಿಕ್ಷಕರು
91 ರಿಂದ 120 ಹಾಜರಾತಿ – ನಾಲ್ಕು ಶಿಕ್ಷಕರು
121 ರಿಂದ 200 ಹಾಜರಾತಿ – ಐದು ಶಿಕ್ಷಕರು
201 ರಿಂದ 240 ಹಾಜರಾತಿ – ಆರು ಶಿಕ್ಷಕರು

1 ರಿಂದ 7ನೇ ತರಗತಿಗಳ ಸರ್ಕಾರಿ ಶಾಲೆಗಳಲ್ಲಿ ಈ ಕೆಳಗಿನಂತೆ ಶಿಕ್ಷಕರ ಸಂಖ್ಯೆಯನ್ನು ಆಧರಿಸಿ ಹೆಚ್ಚುವರಿ ಎಂದು ಪರಿಗಣಿಸಲಾಗುತ್ತಿದೆ.

1 ರಿಂದ 40 ಹಾಜರಾತಿ – ಇಬ್ಬರು ಶಿಕ್ಷಕರು.
41 ರಿಂದ 90 ಹಾಜರಾತಿ – ಮೂರು ಶಿಕ್ಷಕರು.
91 ರಿಂದ 120 ಹಾಜರಾತಿ – ನಾಲ್ಕು ಶಿಕ್ಷಕರು
121 ರಿಂದ 150 ಹಾಜರಾತಿ – ಐದು ಶಿಕ್ಷಕರು
151 ರಿಂದ 180 ಹಾಜರಾತಿ – ಆರು ಶಿಕ್ಷಕರು
181 ರಿಂದ 220 ಹಾಜರಾತಿ – ಏಳು ಶಿಕ್ಷಕರು
221 ರಿಂದ 320 ಹಾಜರಾತಿ – ಎಂಟು ಶಿಕ್ಷಕರು

ಆ) ಉಡುಪಿ ಹಾಗೂ ಕೊಡಗು ಜಿಲ್ಲೆಗಳ ಕೆಲವು ಶಿಕ್ಷಕರಿಗೆ ಹೊರತುಪಡಿಸಿ, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರತಿ ತಿಂಗಳು 5 ರಿಂದ 10ನೇ ತಾರೀಖಿನೊಳಗೆ ವೇತನ ಬಟವಾಡೆಯಾಗುತ್ತಿದೆ.

ಉಡುಪಿ ಹಾಗೂ ಕೊಡಗು ಜಿಲ್ಲೆಗಳಲ್ಲಿ ಹೊಸ ನೇಮಕಾತಿಯಿಂದ ಹಾಗೂ ವೇತನ ಪರಿಷ್ಕರಣದ ಬಾಕಿ, ಗಳಿಕೆ ರಜೆ ಬಾಕಿ ವೇತನಗಳನ್ನು ನೀಡಿದ್ದು ಮತ್ತು 2009–10ನೇ ಸಾಲಿನ ಲಿಂಕ್ ಮೆಂಟ್‌ನಲ್ಲಿ ಕಡಿಮೆ ಅನುದಾನ ಬಿಡುಗಡೆಯಾಗಿದ್ದರಿಂದ ಆ ಜಿಲ್ಲೆಯ ಶಿಕ್ಷಕರುಗಳಿಗೆ ವೇತನ ನೀಡುವಲ್ಲಿ ವಿಳಂಬವಾಗಿದ್ದು, ದಿ: 11–1–2010 ಮತ್ತು 4–2–2010ರಲ್ಲಿ. ಉಡುಪಿ ಜಿಲ್ಲೆಗೆ ಹೆಚ್ಚುವರಿಯಾಗಿ ರೂ. 1,148.01 ಲಕ್ಷಗಳು, ಕೊಡಗು ಜಿಲ್ಲೆಗೆ ರೂ. 3,871.91 ಲಕ್ಷಗಳ ಅನುದಾನವನ್ನು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆ ಮತ್ತು ಅನುದಾನಿತ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರುಗಳಿಗೆ ವೇತನ ಬಿಡುಗಡೆಯಾಗಿ ವೇತನ ಬಟವಾಡೆಯಾಗಿರುತ್ತದೆ. ಹಾಗೂ ಮುಂದುವರೆದು ವೇತನಕ್ಕಾಗಿ ಅನುದಾನ ಕೊರತೆಯಿದ್ದಲ್ಲಿ, ದಿ: 4–2–2010 ರಂದು ಸರ್ಕಾರದ ಆದೇಶದ ಸಂಖ್ಯೆ ಎಫ್.ಡಿ. 233 ಬಿ.ಆರ್.ಎಸ್. 2009 ರಡಿ ಯೋಜನೆ ಹಾಗೂ ಯೋಜನೇತರ ಲೆಕ್ಕ ಶೀರ್ಷಿಕೆಗಳಿಂದ ಉಳಿಕೆಯಾದ ಅನುದಾನವನ್ನು ಮರು ಹೊಂದಾಣಿಕೆ ಮೂಲಕ ಶಿಕ್ಷಕರ ವೇತನವನ್ನು ಪಾವತಿಸಲು ನೇರವಾಗಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್‌ಗಳಿಗೆ ಆದೇಶಿಸಲಾಗಿದೆ.

ಶಿಕ್ಷಕರಿಗೆ ವೇತನ ವಿಳಂಬ ಆಗುತ್ತಿರುವ ತೊಂದರೆಗಳನ್ನು ತಪ್ಪಿಸಿ, ಪ್ರತಿ ತಿಂಗಳು ನಿಗದಿತ ದಿನಾಂಕದಂದು ವೇತನ ಪಾವತಿಯಾಗುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ರಾಜ್ಯದ ಎಲ್ಲಾ ಉಪ ನಿರ್ದೇಶಕರುಗಳು ಹಾಗೂ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೂ ಪ್ರತಿ ಮಾಹೆಯ 5ನೇ ತಾರೀಖಿನೊಳಗಾಗಿ ವೇತನ ಪಾವತಿಸಿ ಮಾಹಿತಿಯನ್ನು 10ನೇ ತಾರೀಖಿನ ಒಳಗೆ ಸಲ್ಲಿಸುವ ಬಗ್ಗೆ ದಿ: 13–8–2008 ಮತ್ತು 13–5–2009ರಲ್ಲಿ ಸುತ್ತೋಲೆ ಹೊರಡಿಸಲಾಗಿದೆ.

ಇ) ಮಕ್ಕಳ ಕೊರತೆಯಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿ ಒಂದು, ಸುಳ್ಯ ತಾಲ್ಲೂಕಿನಲ್ಲಿ ಒಂದು ಹಾಗೂ ಮೂಡಬಿದ್ರೆ ತಾಲ್ಲೂಕಿನಲ್ಲಿ 02, ಒಟ್ಟು 04 ಪ್ರಾಥಮಿಕ ಶಾಲೆಗಳನ್ನು ಮುಚ್ಚಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಯಾವುದೇ ಸರ್ಕಾರಿ ಶಾಲೆಗಳನ್ನು ಮುಚ್ಚಿರುವುದಿಲ್ಲ.

ಸರ್ಕಾರದ ಅನುದಾನಕ್ಕೆ ಒಳಪಡಿಸಿರುವ ಶಾಲೆಗಳು

294 (709) ಶ್ರೀ ಜೆ.ಡಿ.ನಾಯ್ಕ (ಭಟ್ಕಳ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಒಂದೂವರೆ ವರ್ಷಗಳಲ್ಲಿ ಸರ್ಕಾರದ ಅನುದಾನಕ್ಕೆ ಒಳಪಡಿಸಲಾದ ಉತ್ತರ ಕನ್ನಡ ಜಿಲ್ಲೆಯ ತಾಲ್ಲೂಕುವಾರು ಖಾಸಗಿ ತಾಲ್ಲೂಕುವಾರು ಖಾಸಗಿ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಂಸ್ಥೆಗಳು ಯಾವುವು. (ಹೆಸರು ವಿವರ ಒದಗಿಸುವುದು);

ಆ) ಅನುದಾನಕ್ಕೆ ಬಳಸಲಾದ ಮಾನದಂಡ ಹಾಗೂ ಮಾರ್ಗಸೂಚಿಗಳು ಯಾವುವು;

ಇ) ಅನುದಾನಕ್ಕೆ ಒಳಪಡಿಸಲಾದ ಎಷ್ಟು ಶಿಕ್ಷಣ ಸಂಸ್ಥೆಗಳಲ್ಲಿ ಮೂಲಭೂತ ಸೌಕರ್ಯ ಹಾಗೂ ಮಕ್ಕಳ ಕೊರತೆ ಇದೆ. (ವಿವರ ಒದಗಿಸುವುದು);

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಶಿಕ್ಷಣ ಸಚಿವರು) : ಅ)

ಕ್ರ. ಸಂ.	ತಾಲ್ಲೂಕು	ಶಾಲೆಗಳ ಹೆಸರು	ಆಡಳಿತ ಮಂಡಳಿಯ ಹೆಸರು ಹಾಗೂ ಸ್ವರೂಪ
1	ಹಳಿಯಾಳ	ಪರಿಜ್ಞಾನಾಶ್ರಮ ಸ್ವಾಮೀಜಿ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆ, ವನಶ್ರೀ ನಗರ, ದಾಂಡೇಲಿ.	ಶ್ರೀ ಸಾಯಿನಾಥ ಶಿಕ್ಷಣ ಸೇವಾ ಸಮಿತಿ, ವನಶ್ರೀ ನಗರ, ದಾಂಡೇಲಿ, ಉ.ಕ.ಜಿಲ್ಲೆ.
2	ಸಿದ್ದಾಪುರ	ಲಿಟ್ಲ್ ಫ್ಲವರ್ ಹಿರಿಯ ಪ್ರಾಥಮಿಕ ಶಾಲೆ,	ಮರಿಯ ಸಾಲಿಯಾನ